ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆಹಾರ, ನಾಗರೀಕ ಸರಬರಾಜು, ಗ್ರಾಹಕ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರ ಉತ್ತರ.

ಪ್ರಸ್ತಾಪಿಸಿರುವ ವಿಷಯ:

1955ರ ಅಗತ್ಯ ಸರಕುಗಳ ಕಾಯ್ದೆಯಡಿ ಕೇಂದ್ರ ಸರ್ಕಾರ ಮೋಟಾರ್ ಸ್ಪಿರಿಟ್ ಮತ್ತು ಹೈ ಸ್ಪೀಡ್ ಡೀಸೆಲ್ (ಪೂರೈಕ, ವಿತರಣೆ ಮತ್ತು ದುಷ್ಕೃತ್ಯಗಳ ತಡೆಗಟ್ಟುವಿಕೆ ನಿಯಂತ್ರಣ) ನಿಯಮ, 2005 ಜಾರಿಗೆ ತಂದಿದೆ. ಇದರನ್ವಯ ಪೆಟ್ರೋಲಿಯಂ ಉತ್ಪನ್ನಗಳ ಕಲಬೆರಕೆ ಸೇರಿ ಇನ್ನಿತರ ದುಷ್ಕೃತ್ಯ ಕಂಡುಬಂದಲ್ಲಿ ಅಂತಹವರ ವಿರುದ್ಧ ದಂಡನಾತ್ಮಕ ಕ್ರಮ ಕೈಗೊಳ್ಳುವ ಅಧಿಕಾರ ಒದಗಿಸಲಾಗಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ ಅನ್ವಯ 2019 ರಿಂದ 2024ರ ಡಿಸೆಂಬರ್‌ವರೆಗೆ ದೇಶದಾದ್ಯಂತ 3,04,265 ಪ್ರಕರಣಗಳು ದಾಖಲಾಗಿದ್ದು, ಕರ್ನಾಟಕದಲ್ಲೂ ಪ್ರಕರಣ ದಾಖಲಾಗಿದ್ದು, ಕಲಬೆರಕೆ ಮಾಡಿದ ಆರೋಪದ ಮೇಲೆ 6 ಪೆಟ್ರೋಲಿಯಂ ಉತ್ಪನ್ನ ಔಟ್ ಲೇಟ್‌ಗಳ ಪರವಾನಾಗಿಯನ್ನು ರದ್ದುಗೊಳಿಸಿರುವುದು ಸ್ವಾಗತಾರ್ಹ. ಆದರೆ ಇಂತಹ ಕಲಬೆರಕೆ ಹಾಗೂ ಅಕ್ರಮ ಮಾರಾಟಗಳು ಗ್ರಾಮೀಣ ಭಾಗಗಳಲ್ಲೂ ಇತ್ತೀಚೆಗೆ ಹೆಚ್ಚುತ್ತಿವೆ ಇದರಿಂದಾಗಿ ವಾಯು ಮಾಲಿನ್ಯವು ಹೆಚ್ಚುತ್ತಿದ್ದು ಕಲ್ಮಶ ಗಾಳಿ ಸೇವನೆಗೆ ದಾರಿಮಾಡಿಕೊಡುತ್ತಿದೆ. ಆದ್ದರಿಂದ ಇಂತಹ ತಪಾಸಣಾ ಕಾರ್ಯಾಚರಣೆಯನ್ನು ಇನ್ನಷ್ಟು ಸೂಕ್ತವಾಗಿ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳುವಂತೆ ಈ ಮೂಲಕ ಮಾನ್ಯ ಇಂಧನ ಸಚಿವರಿಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಉತ್ತರ:-

Motor Spirit and High Speed Diesel (Regulation of Supply and Distribution and Prevention of Malpractices) Order, 2005ರಡಿ ಕೇಂದ್ರ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆಯು ತಪಾಸಣೆ ಕಾರ್ಯ ಕೈಗೊಳ್ಳುವ ಅಧಿಕಾರವನ್ನು ಹೊಂದಿರುತ್ತವೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ/ಉಪ ನಿರ್ದೇಶಕರುಗಳು ಪ್ರತಿ ಮಾಹೆ ಕಡ್ಡಾಯವಾಗಿ ಪೆಟ್ರೋಲ್ ಬಂಕ್‌ಗಳ ತಪಾಸಣೆ ನಡೆಸಲು ಜಾಬ್‌ಚಾರ್ಟ್‌ನಲ್ಲಿ ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಸಾಲಿನ ಏಪ್ರಿಲ್-2024 ರಿಂದ ಫೆಬ್ರುವರಿ-2025ರವರೆಗೆ ರಾಜ್ಯದಲ್ಲಿ 575 ತನಿಖೆಗಳನ್ನು ಕೈಗೊಂಡಿದ್ದು, ಪೆಟ್ರೋಲ್ ಬಂಕ್‌ನಲ್ಲಿನ ದಾಸ್ತಾನು ವಹಿ, ಪ್ರತಿ ದಿನದ ಮಾರಾಟ ವಹಿ, ದಾಸ್ತಾನು, ದರದ ಫಲಕವನ್ನು ಅಳವಡಿಸಿರುವ ಬಗ್ಗೆ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ.

ಡಿಸೆಂಬರ್ 2024ರ ಮಾಹೆಯಲ್ಲಿ ಶಿವಮೊಗ್ಗ ಜಿಲ್ಲೆಯ ಮೆಸೂರಜ್ ಫ್ಯೂಯಲ್ ಸ್ಟೇಷನ್, ಕೃಷಿ ನಗರ ಬಂಕ್‌ನಲ್ಲಿ ಫಲಕ (Display board) ಅಳವಡಿಸಿರುವುದಿಲ್ಲ, ಹಿಂದಿನ ದಿನದ Daily Sales Register ಮುಕ್ತಾಯಗೊಳಿಸಿರುವುದಿಲ್ಲ, ಇಂಧನ ಕಲಬೆರಕೆ ಪತ್ತೆ ಮಾಡಲು ಲಿಟ್‌ಮಸ್ ಪೇಪರ್ ಇಟ್ಟಿರುವುದಿಲ್ಲ ಮತ್ತು Dip Rod ಇಟ್ಟಿರುವುದಿಲ್ಲವೆಂದು ದಿನಾಂಕ:09.01.2025ರಂದು ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗಿದೆಯೆಂದು ಪೆಟ್ರೋಲ್ ಬಂಕ್ ಪ್ರಾಧಿಕರಣದಾರರು ಸಮಜಾಯಿಷಿಯನ್ನು ಸಲ್ಲಿಸಿದ್ದು, ಸಹಾಯಕ ನಿರ್ದೇಶಕರು (ಅನೌಪಚಾರಿಕ ಪಡಿತರ ಪ್ರದೇಶ), ಶಿವಮೊಗ್ಗ, ಇವರಿಗೆ ಪೆಟ್ರೋಲ್ ಬಂಕ್‌ನವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಕಳುಹಿಸಿ, ನ್ಯೂನತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಂಡು ವರದಿಯನ್ನು ಪಡೆಯಲಾಗಿರುತ್ತದೆ.

ತಪಾಸಣಾ ಸಮಯದಲ್ಲಿ ಲೋಪದೋಷಗಳು ಕಂಡು ಬಂದಲ್ಲಿ Motor Spirit and High Speed Diesel (Regulation of Supply and Distribution and Prevention of Malpractices) Order, 2005ರಡಿ ಪ್ರಾಧಿಕರಣದಾರರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ, ಸಮಜಾಯಿಷಿ ಪಡೆಯಲಾಗುತ್ತಿದೆ. ಸಮಜಾಯಿಷಿ ತೃಪ್ತಿಕರವಾಗಿಲ್ಲದಿದ್ದಲ್ಲಿ ಅಗತ್ಯ ವಸ್ತುಗಳ ಕಾಯ್ದೆ, 1955ರಡಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ/ತೈಲ ಕಂಪನಿಗಳಿಗೆ ವರದಿ ಸಲ್ಲಿಸಲಾಗುವುದು.

ರಾಜ್ಯದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ, ಕ್ಷೇತ್ರಾಧಿಕಾರಿಗಳು ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009 ಹಾಗೂ ಅದರ ಅಧೀನದಲ್ಲಿ ಬರುವ ನಿಯಮಗಳಂತೆ ಪ್ರತೀ ವರ್ಷ ಪೆಟ್ರೋಲ್ ಬಂಕ್‌ಗಳಲ್ಲಿ ಉಪಯೋಗಿಸುತ್ತಿರುವ ಅಳತೆ ಸಾಧನಗಳ ನಿಖರತೆಯನ್ನು ಕಾಪಾಡುವ ಮೂಲಕ ಸತ್ಯಾಪನೆ ಮತ್ತು ಮುದ್ರೆ ಮಾಡಲಾಗುತ್ತಿದೆ ಹಾಗೂ ಗ್ರಾಹಕರಿಗೆ ಅಳತೆಯಲ್ಲಿ ಮೋಸವಾಗದಂತೆ ಆಗಿಂದ್ದಾಗ್ಗೆ ತಪಾಸಣೆ/ಜಂಟಿ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ಪೆಟ್ರೋಲ್ ಪಂಪ್‌ಗಳಲ್ಲಿ ಅಳತೆಯಲ್ಲಿ ಮೋಸವಾದಲ್ಲಿ ಗ್ರಾಹಕರು ದೂರುಗಳನ್ನು ಸಲ್ಲಿಸಲು ಇಲಾಖೆಯ ಸಹಾಯವಾಣಿ ಸಂಖ್ಯೆ (ಹೆಲ್ಪ್-ಲೈನ್): 1800 599 1100 ಇದ್ದು, ಸದರಿ ಸಂಖ್ಯೆಗೆ ಗ್ರಾಹಕರು ಕರೆ ಮಾಡಿ ದೂರುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. ಈ ಬಗ್ಗೆ ದೂರುಗಳು ಸ್ವೀಕೃತವಾದಲ್ಲಿ ಇಲಾಖೆಯ ಸಂಬಂಧಪಟ್ಟ ಕ್ಷೇತ್ರ ವ್ಯಾಪ್ತಿಯ ಕ್ಷೇತ್ರಾಧಿಕಾರಿಗಳಿಂದ ಕೂಡಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಯಾವುದೇ ದೂರುಗಳು ಬಾಕಿ ಇರುವುದಿಲ್ಲ.

ಸಂಖ್ಯೆ: ಅನಾಸ 14 ಎಫ್‌ಪಿಪಿ 2025

**(ಕೆ.ಹೆಚ್.ಮುನಿಯಪ್ಪ)**
ಆಹಾರ, ನಾಗರಿಕ ಸರಬರಾಜು,
ಗ್ರಾಹಕ ವ್ಯವಹಾರಗಳ ಮತ್ತು
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.